

# ಬಣ್ಣ ಬಣ್ಣದ ಬೀಡ್ಸ್

■ ರೂಪಾ ಕೆ.ಎಂ.

ಏನು ತೊಡುತ್ತೇವೋ, ಅದನ್ನು ತುಸು ಅಚ್ಚುಕಟ್ಟಾಗಿ ತೊಟ್ಟರೆ ಅದೇ ಫ್ಯಾಷನ್. ಮೊದಲೆಲ್ಲ ಊರ ಜಾತ್ರೆಯಲ್ಲಿ ಸಿಗುತ್ತಿದ್ದ ಬಣ್ಣ ಬಣ್ಣದ ಬೀಡ್ಸ್‌ಗಳು ವಿನೂತನ ಮಾದರಿಯಲ್ಲಿ ಈಗೀಗ ಫ್ಯಾಷನ್‌ಪ್ರಿಯರನ್ನು ಸೆಳೆಯುತ್ತಿವೆ.

ಮೊದಲಿಗೆ ಈ ಬೀಡ್ಸ್ ಆಭರಣಗಳು ಕಾಲಾತೀತ ಅಥವಾ ಎಲ್ಲಾ ಕಾಲಕ್ಕೂ ಸಲ್ಲುತ್ತವೆ. ಅಂದು ಜಾತ್ರೆಯಲ್ಲಿ ಫಳಫಳನೆ ಹೊಳೆಯುತ್ತಿದ್ದ ಮುತ್ತಿನ ಮಣಿ ಸರಗಳು, ಕಂಡಾಕ್ಷಣ ಇದಾ 'ಉಮಾ ಗೋಲ್ಡ್' ಎಂದು ಮೂಗು ಮುರಿಯುವಂತೆ ಮಾಡುತ್ತಿದ್ದ ಗಾಢ ಬಣ್ಣದ ಮಣಿ ಸರಗಳೆಲ್ಲವೂ ಈಗ ಅಚ್ಚುಕಟ್ಟಾದ ವಿನ್ಯಾಸದಲ್ಲಿ ಕಿವಿ, ಮೂಗು, ಕೈ, ಕತ್ತನ್ನು ಆವರಿಸಿ, ಚಂದದ ಲುಕ್ ನೀಡುತ್ತಿವೆ.

ಸರಳತೆಯ, ಪ್ರಾಕೃತಿಕ ಸಂಬಂಧದ ಬೆಸುಗೆಯಂತೆ ಕಾಣಬಹುದಾದ ಈ ಬೀಡ್ಸ್‌ಗಳನ್ನು ಬರೀ ಹಾಗೆ ತೊಟ್ಟರೂ, ಅದಕ್ಕೆ ಇನ್ನೇನೋ ಸೇರಿಸಿ ವಿನ್ಯಾಸ ಮಾಡಿ ತೊಟ್ಟರೂ ಕ್ಲಾಸಿಕ್ ಲುಕ್ ನೀಡುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಗಾಢ ಕಪ್ಪು ಬಣ್ಣದ ಸೀರೆನೋ, ಕಪ್ಪು ಬಣ್ಣದ ಇಂಡೊವೆಸ್ಟರ್ನ್ ಶೈಲಿಯ ಉಡುಗೆ ತೊಟ್ಟಿದ್ದೀರಾ ಎಂದರೆ ಕಾಮನಬಿಲ್ಲಿನಲ್ಲಿರುವ ಏಳು ಬಣ್ಣದ ಬೀಡ್ಸ್‌ಗಳಿರುವ ಉದ್ದನೆಯ ಸರವನ್ನು ತೊಟ್ಟು ಪಾರ್ಟಿಗೆ ಹೋಗಿ. ಇಡೀ ಪಾರ್ಟಿಯ ಕೇಂದ್ರಬಿಂದು ನೀವಾಗದಿದ್ದರೆ ಹೇಳಿ.

## ಬರೋಕ್ ವಿನ್ಯಾಸದ ಬೀಡ್ಸ್‌ಗಳು

ದೊಡ್ಡ ಗಾತ್ರದ ಮುತ್ತುಗಳೊಂದಿಗೆ ಬರೋಕ್ ಶೈಲಿಯಲ್ಲಿ ಮಾಡಿದ ಆಭರಣಗಳಿವು. ಥೇಟ್ ಒಂದು ಶಿಲ್ಪಕಲೆಯನ್ನು ನೆನಪಿಸುವಂತೆ ಕಾಣುವ ಈ ಬರೋಕ್ ಶೈಲಿಯು ಬೆಳ್ಳಿ ಬಣ್ಣದಲ್ಲಿದ್ದರೆ, ಅದಕ್ಕೆ ಜೋಡಿಸಿದ ಮುತ್ತು ಹಾಲು ಬಣ್ಣದಲ್ಲಿಯೋ ಅಥವಾ ತಿಳಿ ನೇರಳೆ ಬಣ್ಣದಲ್ಲಿಯೋ ಇರುತ್ತದೆ. ಸಾಮಾನ್ಯವಾಗಿ ಮಿಶ್ರಲೋಹ ಬಳಸಿ ಮಾಡಿರುವ ಈ ಆಭರಣವು ಸದ್ಯಕ್ಕೆ ಕ್ಲಾಸಿಕ್ ಪ್ರಿಯರ ಅಷ್ಟೆ ಅಲ್ಲದೇ ಸದಾ ಹೊಸತಿಗೆ ತುಡಿಯುವವರ ಇಷ್ಟದ ಆಭರಣ ಎನಿಸಿದೆ.

## ದಪ್ಪ ಮತ್ತು ವರ್ಣರಂಜಿತ ಬೀಡ್ಸ್‌ಗಳು

ಸಾಮಾನ್ಯವಾಗಿ ಅರೆ ಕಲ್ಲುಗಳು, ಗಾಜು, ಮರ ಹಾಗೂ ರೇಸಿನ್‌ನಿಂದ ಮಾಡಿದ ಗಾಢ ಬಣ್ಣದ ಬೀಡ್ಸ್‌ಗಳ ನೆಕ್ಲೇಸ್, ಚೋಕರ್‌ಗಳಿಗೆ ಉತ್ತಮ ಬೇಡಿಕೆ ಇದೆ.

ಸೀರೆ ಉಟ್ಟಾಗ ಬೀಡ್ಸ್‌ನಿಂದ ಮಾಡಿದ ಲೇಯರ್ಡ್ ನೆಕ್ಲೇಸ್‌ಗಳನ್ನು ತೊಟ್ಟರೆ, ಹೆಚ್ಚು ಮುದ್ದಾಗಿ ಕಾಣಬಹುದು. ದಪ್ಪ ಲೋಹದ ಸರಪಳಿಗಳು, ಚೋರಿಗಳನ್ನು ಬಳಸಿ ಮಾಡಿದ ಬೀಡ್ಸ್ ಸರ ಆಕರ್ಷಕವಾಗಿ ಕಾಣುವಂತೆ ಮಾಡುತ್ತದೆ.



ಬೀಡ್ಸ್ ಸರಗಳನ್ನು ತೊಟ್ಟು ಅಭ್ಯಾಸವೇ ಇರದೇ ಇದ್ದರೆ, ಚೋಕರ್‌ನಿಂದ ಆರಂಭಿಸಿ. ಇದರ ಜತೆಗೆ ಪೆಂಡೆಂಟ್ ಸರಗಳನ್ನು ತೊಟ್ಟು ಬೀಡ್ಸ್ ಆಭರಣ ತೊಡುವ ಅಭ್ಯಾಸ ಮಾಡಿಕೊಳ್ಳಬಹುದು.

ವೆಲ್ವೆಟ್ ಬಟ್ಟೆ, ಉಣ್ಣೆ ಹಾಗೂ ಬೇರೆ ಬೇರೆ ಚರ್ಮದ ಐಷಾರಾಮಿ ಬಟ್ಟೆಗಳನ್ನು ತೊಟ್ಟಾಗ ಮಣಿ ಆಭರಣಗಳನ್ನು ತೊಟ್ಟರೆ ಹೆಚ್ಚು ಸ್ಟೈಲಿಷ್ ಆಗಿ ಕಾಣಬಹುದು. ಯಾವುದೇ ಗಾಢ ಬಣ್ಣದ ವೆಲ್ವೆಟ್ ಬ್ಲೇಜರ್ ಜತೆ ಅದಕ್ಕೆ ವಿರುದ್ಧ ಬಣ್ಣದಲ್ಲಿರುವ ಹೊಳೆಯುವ ಗಾಜಿನ ಬೀಡ್ಸ್‌ಗಳನ್ನು ಧರಿಸಿ.

ಈಗೀಗ ಬೀಡ್ಸ್ ಆಭರಣಗಳು ಗಂಡಸರ ಫ್ಯಾಷನ್ ಆಕ್ಸೆಸರೀಸ್‌ನಲ್ಲಿ ಸ್ಥಾನ ಪಡೆದುಕೊಂಡಿವೆ. ಕ್ಯಾಶುಯಲ್ ವೇರ್‌ಗೂ, ಕೈಗಡಿಯಾರದೊಂದಿಗೆ ವಿನ್ಯಾಸ ಮಾಡಿದ ಬೀಡ್ಸ್ ಮಣಿಕಟ್ಟಿನ ಆಭರಣಗಳು ಜನಪ್ರಿಯಗೊಂಡಿವೆ.

## ಏಳು ಚಕ್ರದ ಬೀಡ್ಸ್ ಬ್ರೇಸ್ಲೆಟ್

ಏಳು ಚಕ್ರದ ಬೀಡ್ಸ್ ಬ್ರೇಸ್ಲೆಟ್ ತೊಡುವವರ ಸಂಖ್ಯೆ ಹೆಚ್ಚೇ ಇದೆ. ದೇಹದಲ್ಲಿ ಮೂಲಾಧಾರ ಚಕ್ರ, ಸ್ವಾಧಿಷ್ಠಾನ ಚಕ್ರ, ಮಣಿಪುರ ಚಕ್ರ, ಅನಾಹತ ಚಕ್ರ, ವಿಶುದ್ಧ ಚಕ್ರ, ಅಜ್ಞಾ ಚಕ್ರ, ಸಹಸ್ರಾರ ಚಕ್ರ ಹೀಗೆ ಏಳು ಚಕ್ರಗಳಿವೆ. ಪ್ರತಿ ಚಕ್ರವೂ ತನ್ನದೇ ದೈಹಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಆರೋಗ್ಯಕ್ಕೆ ಮುಖ್ಯ. ಈ ಹಿನ್ನೆಲೆಯಲ್ಲಿ ಪ್ರತಿ ಚಕ್ರವು ಒಂದೊಂದು ಬಣ್ಣವನ್ನು ಸಂಕೇತಿಸುತ್ತದೆ. ಅದರ ಅನುಸಾರ ಏಳು ಬಣ್ಣದ ಬೀಡ್ಸ್‌ಗಳಿರುವ ಬ್ರೇಸ್ಲೆಟ್ ಅನ್ನು ತೊಡಲಾಗುತ್ತದೆ. ■